# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 564

2. ಸದಸ್ಯರ ಹೆಸರು : ಶ್ರೀ. ಆರ್. ಧರ್ಮಸೇನ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

3. ಉತ್ತರಿಸಬೇಕಾದ ದಿನಾಂಕ : 24-09-2020.

4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರಸ | ಪ್ರಶ್ನೆ | ಉತ್ತರ |
|---|---|---|
| ಅ | ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರ ನೀಡದಿರುವುದರಿಂದ ರಾಜ್ಯ ಸರ್ಕಾರಕ್ಕೆ ಆಗುವ ಪರಿಣಾಮಗಳೇನು; | ರಾಜ್ಯದ ರಾಜಸ್ವ ಸ್ವೀಕೃತಿಗಳಲ್ಲಿ ಜಿ.ಎಸ್.ಟಿ ಪರಿಹಾರವು 2021-22ನೇ ಸಾಲಿನವರೆಗೆ ಒಂದು ಭಾಗವಾಗಿರುತ್ತದೆ. 2020-21ನೇ ಸಾಲಿನ ಆಯವ್ಯಯದಲ್ಲಿ ಜಿ.ಎಸ್.ಟಿ. ಪರಿಹಾರವು ರೂ. 16116.00 ಕೋಟಿಗಳು ಎಂದು ಅಂದಾಜಿಸಲಾಗಿತ್ತು. ಜುಲೈ-20 ರ ಅಂತ್ಯದವರೆಗೆ ಕಳೆದ ವರ್ಷದ ಬಾಕಿ ಮೊತ್ತ ರೂ.7265.83 ಕೋಟಿಗಳು ಸ್ವೀಕೃತವಾಗಿರುತ್ತದೆ.<br>ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರ ನೀಡದಿರುವುದರಿಂದ ಆಯವ್ಯಯದಲ್ಲಿ ಅಂದಾಜಿಸಿರುವ ರಾಜಸ್ವ ಕೊರತೆ ಉಂಟಾಗಬಹುದು. GST ನಷ್ಟ ಪರಿಹಾರ ಸಂಬಂಧ, ರಾಜ್ಯ ಸರ್ಕಾರವು ಆಯ್ಕೆ-1ನ್ನು ಆಯ್ಕೆಮಾಡಿಕೊಂಡಿದ್ದು, ಇದರಲ್ಲಿ ರೂ. 11,324 ಕೋಟಿ ಸಾಲ ಪಡೆಯಲು ಅವಕಾಶವಿದೆ. ಕೇಂದ್ರ ಸರ್ಕಾರವು ಅಸಲು ಮತ್ತು ಬಡ್ಡಿಯನ್ನು ಮರುಪಾವತಿ ಮಾಡುತ್ತದೆ ಎಂದು ತಿಳಿಸಿರುತ್ತದೆ. |
| ಆ | ಇದರಿಂದ, ರಾಜ್ಯದ ಆರ್ಥಿಕ ಹೊಣೆಗಾರಿಕೆಯ ಮೇಲೆ ಪರಿಣಾಮ ಬೀರುವುದಿಲ್ಲವೇ; ಬೀರುವುದಾದರೆ ಯಾವ ಪ್ರಮಾಣದಲ್ಲಿ ಬೀರುತ್ತದೆ; | ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿ.ಎಸ್.ಟಿ. ಪರಿಹಾರ ನೀಡದಿರುವುದರಿಂದ ರಾಜಸ್ವ ಸ್ವೀಕೃತಿಗಳಲ್ಲಿ ಕೊರತೆಯಾಗುತ್ತದೆ. ಆರ್ಥಿಕ ವರ್ಷ ಮುಕ್ತಾಯದ ವರಗೆ ಪ್ರಮಾಣವನ್ನು ನಿಖರವಾಗಿ ಅಂದಾಜಿಸಲು ಬರುವುದಿಲ್ಲ. |
| ಇ | ಇದರಿಂದ ಶೇಕಡವಾರು ಎಷ್ಟು ಹಾನಿಯಾಗುತ್ತದೆ; ಈ ಆರ್ಥಿಕ ಬಿಕ್ಕಟ್ಟನ್ನು ಹೇಗೆ ನಿಭಾಯಿಸಲಾಗುತ್ತದೆ? | ಆಯವ್ಯಯದಲ್ಲಿ ಅಂದಾಜಿಸಿರುವ ಮೊತ್ತಕ್ಕೆ ಜುಲೈ-2020 ರ ಅಂತ್ಯದ ವರೆಗೆ ಸ್ವೀಕೃತವಾಗಿರುವ ಜಿ.ಎಸ್.ಟಿ. ಪರಿಹಾರವು ಶೇಕಡ 45% ಇರುತ್ತದೆ. ನಿಖರವಾದ ಮೊತ್ತ/ಶೇಕಡದ ಬಗ್ಗೆ ಆರ್ಥಿಕ ವರ್ಷದ ಅಂತ್ಯದವರೆಗೆ ಅಂದಾಜಿಸಲು ಬರುವುದಿಲ್ಲ.<br>ಈ ಆರ್ಥಿಕ ಬಿಕ್ಕಟ್ಟನ್ನು ನಿಭಾಯಿಸಲು ರಾಜ್ಯ ಸರ್ಕಾರದಿಂದ ಹಲವಾರು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಅವುಗಳ ಪೈಕಿ ಪ್ರಮುಖ ಕ್ರಮಗಳ ಮಾಹಿತಿ ಕೆಳಕಂಡಂತೆ ಇರುತ್ತದೆ.<br>1. ಸಂಪನ್ಮೂಲಗಳ ಕ್ರೂಢೀಕರಣಕ್ಕೆ ಹೆಚ್ಚಿನ ಒತ್ತು ನೀಡುವುದು.<br>2. ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುವುದು.<br>3. ಕೇಂದ್ರ ಸರ್ಕಾರವು ಅನುವು ಮಾಡಿಕೊಡುವಷ್ಟು ಸಾಲವನ್ನು ಪಡೆಯುವುದು. |

ಸಂಖ್ಯೆ: ಆಇ 47 ಬಿಜಿಎಲ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್. ಯಡಿಯೂರಪ್ಪ)

ಮುಖ್ಯಮಂತ್ರಿ